ಬೆಂಗಳೂರು
ನಗರ ವಿಶ್ವವಿದ್ಯಾನಿಲಯ

**BENGALURU
CITY UNIVERSITY**

Office of the Registrar, Central College Campus, Dr. B.R. Ambedkar Veedhi, Bengaluru – 560 001.
PhNo.080-22131385, E-mail: registrarbcu@gmail.com

ಸಂಖ್ಯೆ: ಬಿಸಿಯು/ವಿ.ವಿ.ಪಿ/ಬಿ.ಓ.ಸಿ/2021-22/154 ದಿನಾಂಕ: 15.06.2021

ಗೆ,
ಮಾನ್ಯ ವಿದ್ಯಾವಿಷಯಕ ಪರಿಷತ್ತಿನ ಸದಸ್ಯರು,
ಬೆಂಗಳೂರು ನಗರ ವಿಶ್ವವಿದ್ಯಾನಿಲಯ,
ಬೆಂಗಳೂರು

ಮಾನ್ಯರೆ,

ವಿಷಯ: ದಿನಾಂಕ 07.06.2021 ರ ವಿದ್ಯಾವಿಷಯಕ ಪರಿಷತ್ತಿನ ಪರಿಚಲನೆಯ ಸಭೆಯ ನಡಾವಳಿಗಳು.

****

ದಿನಾಂಕ 07.06.2021 ರಂದು ಆನ್ ಲೈನ್ ಪರಿಚಲನೆಯ ಮುಖಾಂತರ ಕಳುಹಿಸಲಾಗಿದ್ದ ಮೂರು ಕಾಲೇಜುಗಳ ಸ್ಥಳೀಯ ತಪಾಸಣಾ ವರದಿಗಳನ್ನು ಅನುಮೋದಿಸುವ ಸಂಬಂಧಿಸಿದ ಕಾರ್ಯಸೂಚಿಗೆ ಮಾನ್ಯ ಸದಸ್ಯರುಗಳು ಇ-ಮೇಲ್ ಮುಖಾಂತರ ನೀಡಿರುವ ಅನುಮೋದನೆಯ ಅನುಸಾರವಾಗಿ ನಡಾವಳಿಗಳನ್ನು ಮಾನ್ಯ ಕುಲಪತಿಗಳು ಅನುಮೋದಿಸಿರುವಂತೆ, ಬೆಂಗಳೂರು ವಿಶ್ವವಿದ್ಯಾನಿಲಯದ ಪರಿನಿಯಮಾವಳಿ 4.18 ರನ್ವಯ ಈ ಪತ್ರದೊಂದಿಗೆ ಲಗತ್ತಿಸಲಾಗಿದೆ.

ನಡಾವಳಿಗಳನ್ನು ರವಾನಿಸಿದ ದಿನಾಂಕದಿಂದ ಹದಿನಾಲ್ಕು ದಿನಗಳೊಳಗಾಗಿ, ನಡಾವಳಿಗಳ ಬಗ್ಗೆ ಯಾವುದೇ ಆಕ್ಷೇಪಣೆಯನ್ನು ಸದಸ್ಯರು ಕಳುಹಿಸದಿದ್ದಲ್ಲಿ, ಮೇಲೆ ಹೇಳಿದ ಪರಿನಿಯಮಾವಳಿಗಳ ಅನುಸಾರ ಅವುಗಳನ್ನು ಸ್ಥಿರೀಕರಿಸಲಾಗಿದೆ ಎಂದು ಪರಿಗಣಿಸಲಾಗುವುದು.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

ಕುಲಸಚಿವರು

ಅಡಕ: ಮೇಲಿನಂತೆ

ಪ್ರತಿಗಳು:

1. ರಾಜ್ಯಪಾಲರ ಕಾರ್ಯದರ್ಶಿಗಳು, ರಾಜಭವನ, ಬೆಂಗಳೂರು - 560 001.
2. ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯ), ಕರ್ನಾಟಕ ಸರ್ಕಾರ, ಬೆಂಗಳೂರು-1.
3. ಕುಲಪತಿಗಳು, ಕುಲಸಚಿವರು, ಕುಲಸಚಿವರು (ಮೌಲ್ಯಮಾಪನ), ವಿತ್ತಾಧಿಕಾರಿಗಳ ಆಪ್ತ ಕಾರ್ಯದರ್ಶಿಗಳಿಗೆ. ಬಿಸಿಯು.
4. ಕಛೇರಿ ಪ್ರತಿ / ರಕ್ಷಣಾ ಕಡತ

ಬೆಂಗಳೂರು
ನಗರ ವಿಶ್ವವಿದ್ಯಾನಿಲಯ

BENGALURU
CITY UNIVERSITY

Office of the Registrar, Central College Campus, Dr. B.R. Ambedkar Veedhi, Bengaluru – 560 001.
PhNo.080-22131385, E-mail: registrarbcu@gmail.com

ಸಂಖ್ಯೆ: ಬಿಸಿಯು/ವಿವಿಪ/ಬಿ.ಓ.ಸಿ/67/2021-22

ದಿನಾಂಕ: 15.06.2021

**ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ವಿದ್ಯಾವಿಷಯಕ ಪರಿಷತ್ತಿನ ಆನ್-ಲೈನ್ ಪರಿಚಲನೆಯ ನಡಾವಳಿಗಳು.**

**ವಿಷಯ: MES Teachers College , Florence English Institute of B.Ed Training ಮತ್ತು Kensri Degree College ಕಾಲೇಜುಗಳ ಸ್ಥಳೀಯ ತಪಾಸಣಾ ವರದಿಗಳನ್ನು ಅನುಮೋದಿಸುವ ಬಗ್ಗೆ.**

ದಿನಾಂಕ 23.02.2021 ರಂದು ನಡೆದ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಅಸಾಮಾನ್ಯ ವಿದ್ಯಾವಿಷಯಕ ಪರಿಷತ್ತಿನ ಸಭೆಯಲ್ಲಿ 2020-21 ನೇ ಶೈಕ್ಷಣಿಕ ಸಾಲಿನ ಸ್ಥಳೀಯ ತಪಾಸಣಾ ವರದಿಗಳನ್ನು ಮಂಡಿಸಿ ಅನುಮೋದನೆ ಪಡೆಯಲಾಗಿತ್ತು. ತಾಂತ್ರಿಕ ಕಾರಣಗಳಿಂದಾಗಿ ಸಂಯೋಜನಾ ಸಾಪ್ಟವೇರ್‌ನಲ್ಲಿ ನ score generation ಗೆ ಸಂಬಂಧಿಸಿದಂತೆ ವಿಳಂಬವಾದ ಕಾರಣಕ್ಕಾಗಿ ಕೆಳಕಂಡ ಕಾಲೇಜುಗಳ ಸ್ಥಳೀಯ ತಪಾಸಣಾ ವರದಿಗಳನ್ನು ಸದರಿ ಸಭೆಯಲ್ಲಿ ಮಂಡಿಸಲು ಸಾಧ್ಯವಾಗಿರಲಿಲ್ಲ.

ರಾಜ್ಯ ಮತ್ತು ದೇಶಾದ್ಯಂತ ಹರಡುತ್ತಿರುವ ಕೋವಿಡ್ -19 ಕೊರೋನಾ ವೈರಸ್ ನಿಯಂತ್ರಣ ಮತ್ತು ಮುನ್ನೆಚ್ಚರಿಕೆ ಕ್ರಮವಾಗಿ ರಾಜ್ಯ ಸರ್ಕಾರ ಸಭೆ- ಸಮಾರಂಭಗಳನ್ನು ನಿರ್ಬಂಧಿಸಿರುವುದರಿಂದ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ವಿದ್ಯಾವಿಷಯಕ ಪರಿಷತ್ತಿನ ಸಭೆಯನ್ನು ಆಯೋಜಿಸಲು ಸಾಧ್ಯವಾಗುತ್ತಿಲ್ಲ. ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯ ಕಾರಣದಿಂದಾಗಿ ವಿಶ್ವವಿದ್ಯಾನಿಲಯದ ಅತ್ಯಂತ ಜರೂರಾದ ಸಂಯೋಜನೆಗೆ ಸಂಬಂಧಿಸಿದ ತಾಂತ್ರಿಕ ಕಾರಣಗಳಿಂದ ಈ ಮೂರು ಕಾಲೇಜುಗಳ ಸ್ಥಳೀಯ ತಪಾಸಣಾ ವರದಿಗಳನ್ನು ದಿನಾಂಕ 7.06.2021 ರಂದು ವಿದ್ಯಾವಿಷಯಕ ಪರಿಷತ್ತಿನ ಸದಸ್ಯರುಗಳಿಗೆ ಪರಿಶೀಲನೆ ಹಾಗೂ ಅನುಮೋದನೆಗಾಗಿ ಆನ್ ಲೈನ್ ಪರಿಚಲನೆಯ ಮುಖಾಂತರ (By Online Circulation) ಕಳುಹಿಸಿಕೊಡಲಾಗಿದೆ. ಈ ವಿಷಯಕ್ಕೆ ಸದಸ್ಯರ ಅನುಮೋದನೆಯನ್ನು ಇ-ಮೇಲ್ ಮುಖಾಂತರ ದಿನಾಂಕ 11.06.2021 ರ ಒಳಗಾಗಿ ತಿಳಿಸಬೇಕೆಂದು ಕೋರಲಾಗಿತ್ತು. ಸದರಿ ದಿನಾಂಕದ ಒಳಗೆ ತಮ್ಮ ಅನುಮೋದನೆ ಬಾರದಿದ್ದಲ್ಲಿ ಸದರಿ ವಿಷಯಕ್ಕೆ ತಮ್ಮ ಅನುಮೋದನೆ ಇದೆ ಎಂದು ಭಾವಿಸಲಾಗುವುದೆಂದು ತಿಳಿಸಲಾಗಿತ್ತು.

ಕೆ ಎಸ್ ಯು ಕಾಯ್ದೆ 2000 ಸೆಕ್ಷನ್ 59(8)ರ ಅನ್ವಯ "The Academic council shall soon after the receipt of the report of the Local enquiry committee consider the findings of the committee envisaged in the report and make such further inquiry as may appear to it to be necessary and record its opinion on such report and transmit it to the Syndicate".

ಆದುದರಿಂದ ಸದರಿ ವಿಷಯಕ್ಕೆ ಸಂಬಂಧಿಸಿದಂತೆ ವಿದ್ಯಾವಿಷಯಕ ಪರಿಷತ್ತಿನ 07 ಸದಸ್ಯರುಗಳು ಇ-ಮೇಲ್ ಮುಖಾಂತರ ಅನುಮೋದನೆಯನ್ನು ನೀಡಿರುತ್ತಾರೆ. ಈ ಮೂರು ಕಾಲೇಜುಗಳ ಸ್ಥಳೀಯ ತಪಾಸಣಾ ವರದಿಗಳು ಈ ಕೆಳಕಂಡಂತಿರುತ್ತದೆ.

| Name of the LIC | Name of the College | Score Generated by the committee |
|---|---|---|
| 1. Dr. K. R. Ramesh Committee | MES Teachers College | 83.82 |
| 2. Dr. K. R. Ramesh Committee | Florence English Institute of B.Ed training Collge | 66.54 |
| 3. Mr. Thomas Neeliyara Committee | Kensri Degree College | 65.98 |

## ವಿದ್ಯಾವಿಷಯಕ ಪರಿಷತ್ ಸಭೆ ನಿರ್ಣಯ

ಸೂಚಿತ ವಿಷಯಕ್ಕೆ ಸಂಬಂಧಿಸಿದಂತೆ ವಿದ್ಯಾವಿಷಯಕ ಪರಿಷತ್ತಿನ ಸದಸ್ಯರುಗಳು ಇ-ಮೇಲ್ ಮುಖಾಂತರ ಅನುಮೋದನೆಯನ್ನು ನೀಡಿರುವುದರಿಂದ, ಬೆಂಗಳೂರು ನಗರ ವಿಶ್ವವಿದ್ಯಾನಿಲಯದ 2020-21 ನೇ ಸಾಲಿನ ಸಂಯೋಜನೆಗಾಗಿ ರಚಿಸಿದ್ದ ಡಾ. ಕೆ. ಆರ್. ರಮೇಶ್ ರವರ ಅಧ್ಯಕ್ಷತೆಯಲ್ಲಿ ಸಲ್ಲಿಸಿದ್ದ 02 ಕಾಲೇಜುಗಳ ವರದಿಗಳನ್ನು **(MES Teachers College and Florence English Institute of B.Ed training College)**, ಶ್ರೀ ಥಾಮಸ್ ನೀಲಿಯಾರ ರವರ ಸಮಿತಿಯ 1 ವರದಿಗಳನ್ನು**(Kensri Degree College)**, ಮುಂದಿನ ಪ್ರಕ್ರಿಯೆಗಾಗಿ ಅನುಮೋದಿಸಲಾಗಿದೆ.

ಕುಲಸಚಿವರು ಹಾಗೂ
ಸದಸ್ಯ ಕಾರ್ಯದರ್ಶಿಗಳು

ಕುಲಪತಿಗಳು